ಸೂಚಿಸಿದ ಮಿತಿಯಲ್ಲಿ ಬೇಟೆಯಾಡಬಹುದು. ಹಾಗೆ ಆಡುವ ಬೇಟೆಗೆ ವಯಸ್ಸಾದ ಮತ್ತು ಬೇಟೆಗೆ ಅರ್ಹವಾದ ಪ್ರಾಣಿಯನ್ನು ಆದಿವಾಸಿಗಳು ಹುಡುಕಿಕೊಡುತ್ತಾರೆ. ಆದರೆ, ಆನೆ ದಿನನಿತ್ಯದ ಬೇಟೆಗೆ ಒಡ್ಡಿಕೊಳ್ಳುವುದಿಲ್ಲ. ಹಂಚಿ ಬದುಕುವ ಸಂಸ್ಕೃತಿ ಬೆಳೆಯಲು ಮತ್ತೊಂದು ಕಾರಣವೂ ಇದೆ. ಪಕ್ಕಾ ಮನೆಗಳಿಲ್ಲದವರಿಗೆ ಸಂಗ್ರಹಿಸಿಡಲು ಖಾಸಗಿ ಎನ್ನಿಸುವ ಜಾಗ ಅಥವಾ ಆಲೋಚನೆಯೇ ಉಂಟಾಗುವುದಿಲ್ಲ. ಒಂದು ಜಾಗದಿಂದ ಮತ್ತೊಂದಕ್ಕೆ ಸಾಗುತ್ತಿರುವ ಸದಾಯಾತ್ರಿಗಳಿಗೆ ಸಂಗ್ರಹವೆನ್ನುವುದು ಉಪದ್ರವವೇ. ಬಟ್ಟೆಬರೆಗಿಂತ ಹೆಚ್ಚಿನ ವಸ್ತುಗಳನ್ನು ಸಂಗ್ರಹಿಸಿದರೆ, ಸಾಗಿಸುವುದೆಂತು?

ಕಾಡಿಗೆ ಹೋಗಿ ತಂದ ಬೇಟೆಯನ್ನು ಹಂಚಿಕೊಂಡಾಗ ಅದಕ್ಕೆ ಕೃತಜ್ಞರಾಗಿರಬೇಕೆಂಬ ಪರಿಪಾಠವೂ ಈ ಜನರಲ್ಲಿಲ್ಲ. ತನ್ನದೆನ್ನುವ ಆಸ್ತಿಯನ್ನು ತ್ಯಾಗ ಮಾಡಿ ಬೇರೊಬ್ಬರಿಗೆ ಕೊಟ್ಟಾಗ ಅದು ಕೃತಜ್ಞತೆಗೆ ಪಾತ್ರವಾಗುತ್ತದೆ. ಆದರೆ, ಸಹಜವಾಗಿ ಹಂಚಿ ತಿನ್ನುವುದೇ ನಿಯಮವಾದಾಗ ಕೃತಜ್ಞತೆಯ ಮಾತೆಲ್ಲಿ? ಹೀಗಾಗಿ, ಕೃತಜ್ಞತೆಯೂ ಇಲ್ಲ, ಹೊಗಳಿಕೆಯೂ ಇಲ್ಲ. ಬದಲಿಗೆ ಮಾಂಸ ಹಂಚಿದವರ ಕೌಶಲ್ಯವನ್ನು ಲೇವಡಿ ಮಾಡುವುದು, ಹಾಸ್ಯ ಉಡಾಫೆಯಿಂದ ನೋಡುವುದರಿಂದ ಬೇಟೆಯಾಡುವುದು ಆಹಾರದ ಅವಶ್ಯತೆಯಿಂದಾಗಿಯೇ ಹೊರತು ಅದನ್ನು ವಿಶೇಷ ಕೌಶಲವಾಗಿ ಕಾಣುವ ಸಂದರ್ಭ ಒದಗುವುದಿಲ್ಲ.

ಸಿಂಹಗಳೊಂದಿಗಿನ ಸಹಜೀವನದ ಬಗ್ಗೆ ಒಂದು ಗಮ್ಮತ್ತಿನ ಕಥೆಯನ್ನು ಸುಜ್‌ಮನ್ ಹೇಳುತ್ತಾರೆ. ಅವರ ಮೌಖಿಕ ಚರಿತ್ರೆಯಲ್ಲಿ – ಸಿಂಹಗಳು ಆದಿವಾಸಿಗಳನ್ನೂ ಆದಿವಾಸಿಗಳು ಸಿಂಹಗಳನ್ನೂ ಕೊಲ್ಲುವುದಿಲ್ಲ ಎನ್ನುವ ಅಲಿಖಿತ ಒಪ್ಪಂದವಿತ್ತಂತೆ. ಸಿಂಹಗಳು ಆದಿವಾಸಿಗಳ ಮೇಲೆ ಎರಗದಿರಲು, ಕೊಂದ ಇತರೆ ಪ್ರಾಣಿಯ ಮಾಂಸದ ಒಂದು ಭಾಗವನ್ನು ಕಾಡಿನಲ್ಲಿ ಸಿಂಹಗಳಿಗಾಗಿ ಬಿಡುತ್ತಿದ್ದರಂತೆ. ಅಂತೆಯೇ ಸಿಂಹಗಳು ಬೇಟೆಯಾಡಿದ ಪ್ರಾಣಿಯ ಮಾಂಸವೂ ಆದಿವಾಸಿಗಳಿಗೆ ಸಿಗುತ್ತಿತ್ತು. ಕೃಷಿಯನ್ನು ನಂಬಿದ ಜನರ ಆಗಮನದಿಂದ ಈ ಒಪ್ಪಂದ ಮುರಿದುಬಿತ್ತು. ಕೃಷಿಯನ್ನು ನಂಬಿದವರು ಜಾನುವಾರುಗಳನ್ನೂ ಸಾಕುತ್ತಿದ್ದರು. ಅವುಗಳನ್ನು ಸಿಂಹಗಳು ಬೇಟೆಯಾಡುತ್ತಿದ್ದುವು (ಎಷ್ಟಾದರೂ ಸಿಂಹಗಳ ಒಪ್ಪಂದವಿದ್ದದ್ದು ಆದಿವಾಸಿಗಳ ಜೊತೆಗಾಗಲೀ ಜಾನುವಾರುಗಳ ಜೊತೆಗಲ್ಲವಲ್ಲ!) ಸಿಂಹಗಳು ತಮ್ಮ ಸಾಕುಪ್ರಾಣಿಗಳನ್ನು ಬೇಟೆಯಾಡುತ್ತಿದ್ದುರಿಂದ, ಕೃಷಿಕರು ಸಿಂಹಗಳನ್ನು ಬೇಟೆಯಾಡಲು ತೊಡಗಿ, ಆ ಜಾಗದಲ್ಲಿದ್ದ ಸಮತೋಲನ ಕಳೆಯಿತಂತೆ. ಕಡೆಗೂ ಇಲ್ಲಿ ಗೆಲ್ಲುವುದು ಮಾನವನೇ. ಹೀಗಾಗಿ, ಸಿಂಹಗಳನ್ನು ಅಭಯಾರಣ್ಯಗಳಲ್ಲಿ ರಕ್ಷಿಸಿಡಬೇಕಾದ ಸಂದರ್ಭ ಒದಗಿಬರಬಹುದು.

ನ್ಯೂರಿಟ್ ಬರ್ಡ್ ಕೂಡ, ನೀಲಗಿರಿ ಪ್ರಾಂತದಲ್ಲಿರುವ ನಾಯಕ (ಬೇಟೆ, ಸಂಗ್ರಹ), ಬೆಟ್ಟೆ (ಚಲನ ಕೃಷಿ) ಮತ್ತು ಮುಳ್ಳುಕುರುಂಬ (ಸ್ಥಾಯಿ ಕೃಷಿ) ಜನಜಾತಿಗಳಲ್ಲಿನ ವ್ಯತ್ಯಾಸವನ್ನು ಉಲ್ಲೇಖಿಸುತ್ತಾ ಹೇಗೆ ಹಂಚಿಕೆ–ಕೊಡುಗೆಯು ಕೃಷಿಯೇತರ ಜನಜಾತಿಗಳಲ್ಲಿ ಪ್ರಮುಖವಾಗಿ ಕಾಣಿಸುತ್ತದೆ ಎನ್ನುವುದನ್ನು ಉಲ್ಲೇಖಿಸುತ್ತಾರೆ.

ತಲೆತಲಾಂತರದಿಂದ ಹಂಚಿಕೊಂಡೇ ಬಂದಿರುವ ಈ ಜನರಿಗೆ ಸಂಗ್ರಹದ ಪ್ರಾಮುಖ್ಯತೆ ವಿವರಿಸುವುದು ಕಷ್ಟವೇ. ನೀಲಗಿರಿ ಪ್ರಾಂತದಲ್ಲಿ ಈ ಬುಡಕಟ್ಟು ಜನಾಂಗದವರೊಂದಿಗೆ ಕೆಲಸ ಮಾಡುವ ಸ್ವಾನ್ ತೆಕ್ಕೆಕ್ಕಾರ ಒಮ್ಮೆ ಮಾತಿನಲ್ಲಿ ಈ ವಿಷಯ ಹೇಳಿದ್ದರು. ನಾಯಕ ಬುಡಕಟ್ಟಿನ ಜನರೊಂದಿಗೆ ಸ್ವಸಹಾಯ ಗುಂಪುಗಳನ್ನು ಏರ್ಪಡಿಸಿ, ತಿಂಗಳಿಗೊಮ್ಮೆ ಇಂತಿಷ್ಟು ಉಳಿತಾಯವನ್ನು ಮಾಡಬೇಕು ಎಂದಾಗ ಗುಂಪಿನ ಸದಸ್ಯರು ಬಡ್ಡಿ ವ್ಯಾಪಾರಿಯಿಂದ ಸಾಲ ಪಡೆದು ಉಳಿತಾಯದ ಮೊಬಲಗನ್ನು ಸಲ್ಲಿಸಿದರಂತೆ. ಬಡ್ಡಿ ಎನ್ನುವುದು ಕಾಲದ ಮೇಲೆ ಕಟ್ಟುವ ಲೆಕ್ಕ. ಆದರೆ, ಯಾವಾಗ